(ಗೊಂದಲ)

ಪ್ರಶ್ನೋತ್ತರಗಳು

6) ಚುಕ್ಕೆ ಗುರ್ತಿನ ಮತ್ತು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು:- ದಿನಾಂಕ 31-3-2003ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 10 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 66 ಪ್ರಶ್ನೆಗಳ ಪೈಕಿ 54 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ 1)

ಮಂಡಿಸಲಾಯಿತು

7) ಅಧ್ಯಕ್ಷರಿಂದ ಯುಗಾದಿಯ ಶುಭಾಶಯಗಳು

ಅಧ್ಯಕ್ಷರು:- ತಮಗೆಲ್ಲಾ ಮುಂದಿನ ವರ್ಷದ ಯುಗಾದಿ ಹಬ್ಬದ ಶುಭಾಶಯವನ್ನು ಕೋರಿ, ಮುಂದಿನ ವರ್ಷ ಬರೀ ಬೇವು ಅಲ್ಲ, ಬರೀ ಬೆಲ್ಲ ಮಾತ್ರ ಸಿಗಲಿ ಎಂದು ಹೇಳಿ, ನಾನು ಈ ಸದನವನ್ನು ಅನಿರ್ದಿಷ್ಟ ಕಾಲ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 4.02 ಗಂಟೆಗೆ ಅನಿರ್ದಿಷ್ಟ ಕಾಲ ಮುಂದೂಡಲ್ಪಟ್ಟಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

8) ಅನುಬಂಧ

ದಿನಾಂಕ 31-3-2003ರ ಚುಕ್ಕೆ ಗುರುತಿನ ಪ್ರಶ್ನೋತ್ತರ

ನೆಲಮಂಗಲ ತಾಲ್ಲೂಕು ಶಿವಗಂಗೆ ಪುಣ್ಯಕ್ಷೇತ್ರ ಅಭಿವೃದ್ಧಿ

297 (2576) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲ ತಾಲ್ಲೂಕು ಶಿವಗಂಗೆ ಪುಣ್ಯ ಕ್ಷೇತ್ರಗಳಲ್ಲಿ ಒಂದಾಗಿದ್ದು, ಭಕ್ತಾದಿಗಳು ದೇವರ ದರ್ಶನಕ್ಕಾಗಿ ಬೆಟ್ಟವನ್ನು ಹತ್ತಲು ಆಸರೆಗಾಗಿ ಅಳವಡಿಸಿರುವ ಕಬ್ಬಿಣದ ಪೈಪ್ ತುಕ್ಕು ಹಿಡಿದು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅನಾಹುತ ತಪ್ಪಿಸಲು ಹೊಸದಾಗಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ಹೌದು ಬಂದಿದೆ.

ಆ) ಬೆಟ್ಟ ಹತ್ತಲು ಹೊಸದಾಗಿ ಕಬ್ಬಿಣದ ಪೈಪು ಅಳವಡಿಸಲು ರೂ. 1.73 ಲಕ್ಷಗಳ ಅಂದಾಜುಪಟ್ಟಿ ತಯಾರಿಸಲಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

ಇ) ಶ್ರೀ ಕ್ಷೇತ್ರದ ರಥ ನಿರ್ಮಾಣಕ್ಕಾಗಿ ರೂ. 8.25 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿ ತಾಂತ್ರಿಕ ಅನುಮೋದನೆಗೆ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಲಾಗಿದೆ. ಇದಲ್ಲದೆ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿ ತಯಾರಿಸಲು ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಗಿದೆ.

1) 4 ಗೋಪುರಗಳ ದುರಸ್ಥಿ

2) 2 ವಿಮಾನ ಗೋಪುರಗಳ ದುರಸ್ಥಿ